ಆ) ಹೆಚ್ಚು ಅಲ್ಕೋಹಾಲ್ ಇರುವ ಕಡಿಮೆ ದರ್ಜೆಯ ದ್ರವ್ಯ ತಯಾರಿಕೆಗೆ ಎಷ್ಟು ಘಟಕಗಳಿಗೆ ಅನುಮತಿ ನೀಡಲು ಸರ್ಕಾರ ಚಿಂತನೆ ನಡೆಸಿದೆ ಅವು ಯಾವುವು , (ವಿವರ ನೀಡುವುದು)

ಇ) ಈಗ ನಗರ ಪ್ರದೇಶದಲ್ಲಿ ಎಷ್ಟು ಪ್ರದೇಶದಲ್ಲಿ ಎಷ್ಟು ಜನರಿಗೊಂದು ಅಂಗಡಿ ಹಾಗೆ ಗ್ರಾಮೀಣ ಪ್ರದೇಶದಲ್ಲಿ ಎಷ್ಟು ಜನರಿಗೊಂದು ಮದ್ಯದಂಗಡಿಗಳು ಇರಬೇಕೆಂದು ನಿಯಮವಿದೆ, ಇದನ್ನು ಕಡಿಮೆ ಮಾಡುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆಯೇ ,

ಈ) ಹಾಗಿದ್ದಲ್ಲಿ, ಎಷ್ಟು ಜನರಿಗೆ ಒಂದರಂತೆ ನಿಗಧಿಗೊಳಿಸಲಾಗುವುದು?

ಶ್ರೀ ಬಿ ಎಸ್ ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು)

ಅ) ರಾಜ್ಯದಲ್ಲಿ 2007–08ನೇ ಸಾಲಿಗೆ ಯಾವುದೇ ಹೊಸ ಮದ್ಯದ ಅಂಗಡಿಗಳೀಗೆ ಬಾರ್‌ಗಳಿಗೆ ಸನ್ನದು ನೀಡುವುದಿಲ್ಲ

ಆ) ಹೆಚ್ಚು ಅಲ್ಕೋಹಾಲ್ ಇರುವ ಕಡಿಮೆ ದರ್ಜೆಯ ಮದ್ಯ ತಯಾರಿಸುವ ಘಟಕಗಳಿಗೆ ಅನುಮತಿ ನೀಡಲು ಸರ್ಕಾರ ಚಿಂತನೆ ನಡೆಸಿರುವುದಿಲ್ಲ

ಇ) ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿಯ ಮದ್ಯ ಮಾರಾಟ) ನಿಯಮಗಳು 1968ರ ನಿಯಮ–12ರ ಪ್ರಕಾರ ನಗರ ಪ್ರದೇಶದಲ್ಲಿ 7600 ಜನಸಂಖ್ಯೆಗೆ ಒಂದರಂತೆ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ 15,000 ಜನಸಂಖ್ಯೆಗೆ ಬಂದರಂತೆ ಮದ್ಯದ ಅಂಗಡಿಯನ್ನು ನೀಡಬೇಕೆಂಬ ನಿಯಮವಿದೆ

ಇದನ್ನು ಕಡಿಮೆ ಮಾಡುವ ಬಗ್ಗೆ ಸರ್ಕಾರ ಚಿಂತನೆ ನಡೆಸಿರುವುದಿಲ್ಲ

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ

ಪಿಚ್ಚಹಳ್ಳಿಮಜರಾ ಗ್ರಾಮವನ್ನು ಕಂದಾಯ ಗ್ರಾಮವನ್ನಾಗಿ ಮಾಡುವುದು

864(1039) ಶ್ರೀ ವೆಂಕಟಮುನಿಯಪ್ಪ ಬಿ ಪಿ (ಬೇತಮಂಗಲ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬಂಗಾರಪೇಟೆ ತಾಲ್ಲೂಕು ಘಟ್ಟ ಕಾಮಧೇನ ಹಳ್ಳಿ ಮಜರಾ ಗ್ರಾಮವಾದ ಪಿಚ್ಚಹಳ್ಳಿಯನ್ನು ಕಂದಾಯ ಗ್ರಾಮವನ್ನಾಗಿ ಪರಿವರ್ತಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ,

ಆ) ಹಾಗಿದ್ದಲ್ಲಿ ಸದರಿ ಕಾರ್ಯವು ಯಾವಾಗ ಚಾಲ್ತಿಗೆ ಬರಲಿದೆ,

ಇ) ಹಾಗಿಲ್ಲದಿದ್ದಲ್ಲಿ 3000ಕ್ಕೂ ಹೆಚ್ಚಾಗಿ ಜನಸಂಖ್ಯೆ ಹೊಂದಿರುವ ಈ ಗ್ರಾಮವನ್ನು ಕಂದಾಯ ಗ್ರಾಮವನ್ನಾಗಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಪರಿಶೀಲನೆಯಲ್ಲಿದೆ

ಆ) ಈ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಂದ ಸಮಗ್ರ ಮಾಹಿತಿಯೊಂದಿಗೆ ಪ್ರಸ್ತಾವನೆ ಪಡೆದು ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು

ಇ) ಮೇಲಿನ (ಆ) ಉತ್ತರದಿಂದ ಉದ್ಭವಿಸುವುದಿಲ್ಲ

865(945) ಶ್ರೀ ವಿಶ್ವನಾಥ ಹೆಚ್ ಎಂ (ಸಕಲೇಶಪುರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 2005–06 ಮತ್ತು 2006–07ನೇ ಸಾಲಿನಲ್ಲಿ ಆಲೂರು ಸಕಲೇಶಪುರ ತಾಲ್ಲೂಕುಗಲ್ಲಿ ಆನೆ ಹಾವಳಿಯಿಂದ ಉಂಟಾದ ಮಾನವ ಪ್ರಾಣಹಾನಿ ಪ್ರಕರಣಗಳೆಷ್ಟು ?

ಆ) ಗಾಯಗೊಂಡಂತಹ ಪ್ರಕರಣಗಳೆಷ್ಟು ? ಎಷ್ಟು ಪ್ರಕರಣಗಳಿಗೆ ಪರಿಹಾರ ನೀಡಲಾಗಿದೆ?

ಇ) ಪರಿಹಾರ ನೀಡದಿರುವ ಪ್ರಕರಣಗಳೆಷ್ಟು? ನೀಡದಿದ್ದರೆ ಕಾರಣಗಳೇನು?

ಈ) 2005–06 ಮತ್ತು 2006–07ನೇ ಸಾಲಿನಲ್ಲಿ ಎಷ್ಟು ಕಾಡಾನೆಗಳನ್ನು ಹಿಡಿದು ಸ್ಥಳಾಂತರಿಸಲಾಗಿದೆ?

ಉ) ಈ ವ್ಯಾಪ್ತಿಯಲ್ಲಿ ಈಗ ನೆಲೆಸಿರುವ ಕಾಡಾನೆಗಳ ಸಂಖ್ಯೆ ಎಷ್ಟು?

ಊ) ಕಾಡಾನೆಗಳನ್ನು ಹಿಡಿದು ಸ್ಥಳಾಂತರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? ತೆಗೆದುಕೊಂಡಿದ್ದರೆ ಆ ಪ್ರಕ್ರಿಯೆ ಯಾವ ಹಂತದಲ್ಲಿದೆ (ವಿವರ ನೀಡುವುದು)?

ಶ್ರೀ ಸಿ ಚೆನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಹಾಸನ ಜಿಲ್ಲೆಯ ಆಲೂರು ಮತ್ತು ಸಕಲೇಶಪುರ ತಾಲ್ಲೂಕುಗಳಲ್ಲಿ 2005–06 ಮತ್ತು 2006–07ನೇ ಸಾಲಿನಲ್ಲಿ ಕಾಡಾನೆಗಳ ಹಾವಳಿಯಿಂದ ಉಂಟಾದ ಮಾನವ ಪ್ರಾಣಹಾನಿ ಪ್ರಕರಣಗಳ ವಿವರ ಈ ಕೆಳಗಿನಂತಿದೆ

ವರ್ಷ	ಮಾನವ ಪ್ರಾಣ ಹಾನಿ ಪ್ರಕರಣ ಸಂಖ್ಯೆ	ವಿತರಿಸಿರುವ ಪರಿಹಾರ ಧನ
2005–06	1	1,00,000/–
2006–07	3	3,00,000/–
ಒಟ್ಟು	4	4,00,000/–